SCHEDULED TRIBE IAS OFFICERS

Heads of Departments :

1. Sri D. Venkateswara Rao, Chief Secretary, Zilla Parishad, Kolar.

ಪೊಲೀಸ್ ಇಲಾಖೆಯಲ್ಲಿ ಮಹಿಳಾ ಪೊಲೀಸರು ಹಾಗೂ ಅಧಿಕಾರಿಗಳ ಸಂಖ್ಯೆ.

೧೧೪೧. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದ ಪೊಲೀಸ್ ಇಲಾಖೆಯಲ್ಲಿರುವ ಒಟ್ಟು ಸಿಬ್ಬಂದಿಯ ಸಂಖ್ಯೆ ಎಷ್ಟು?

(ಆ) ಇವರುಗಳಲ್ಲಿ ಐ.ಪಿ.ಎಸ್. ಹಾಗೂ ಕೆ.ಪಿ.ಎಸ್ ಇತರೆ ಸಿಬ್ಬಂದಿ ವರ್ಗದವರೆಷ್ಟು

(ಇ) ಇವರ ಪೈಕಿ ಮಾಹಿಳೆಯರ ಸಂಖ್ಯೆ ಎಷ್ಟು

ಈ) ಮಹಿಳಾ ಪೊಲೀಸರುಹಾಗೂ ಅಧಿಕಾರಿಗಳನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕಿದೆಯೇ?

(ಉ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

(ಅ) ಪುರುಷರು ಮತ್ತು ಮಹಿಳಾ ಸಿಬ್ಬಂದಿ ಸೇರಿದಂತೆ ರಾಜ್ಯ ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿಯ ಸಂಖ್ಯೆ : ೪೭,೬೨೫.

ವಿವರ ಕೆಳಕಂಡಂತಿದೆ

೧)	ಐ. ಪಿ. ಎಸ್.	...	೧೦೮
೨)	ಕೆ. ಎಸ್. ಪಿ. ಎಸ್	...	೨೧೫
೩)	ಪೊ. ಇ. ರಿ. ಪೊ. ಇ	...	೫೩೫
೪)	ಸಬ್ ಇನ್ಸ್‌ಪೆಕ್ಟರ್ : ರಿ. ಸಬ್ ಇನ್ಸ್‌ಪೆಕ್ಟರ್	...	೨೮೫೫
೫)	ಅಸಿಸ್ಟೆಂಟ್ ಪೊ. ಸ. ಇ : ರಿಸರ್ವ್ ಆ. ಪೊ. ಸ. ಇ.	...	೯೮೬
೬)	ಪೊ. ಹೆ. ಕಾ : ರಿ. ಹೆ ಕಾ	...	೮೮೮೨
೭)	ಪೊ. ಕಾ. : ರಿ. ಪೊ. ಕಾ.	...	೩೪೧೬೨

(ಇ) ೩೩೫.

(ಈ) ಈ ಪ್ರಸ್ತಾವನೆಯು ಸರ್ಕಾರದ ಮುಂದಿದೆ.

(ಉ) ಈ ಪ್ರಸ್ತಾವನೆ ಪೊಲೀಸ್ ಇಲಾಖೆಯ ವ್ಯಂದ ಮತ್ತು ನೇಮಕಾತಿ ನಿಯಮಗಳ ಪುನರ್ ವಿಮರ್ಶೆಯಡಿಯಲ್ಲಿ ಪರಿಶೀಲಿಸಲಾಗುತ್ತಿದೆ.

ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿ ಶ್ರೇಷ್ಠ ನ್ಯಾಯಾಲಯದ ಬ್ರಾಂಚ್‌ನ್ನು ಸ್ಥಾಪನೆ.

೧೧೪೭. ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಹುಬ್ಬಳ್ಳಿ—ಧಾರವಾಡ ಮಹಾ ನಗರಗಳಲ್ಲಿ ರಾಜ್ಯ ಶ್ರೇಷ್ಠ ನ್ಯಾಯಾಲಯದ ಬ್ರಾಂಚನ್ನು ಸ್ಥಾಪನೆ ಮಾಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಆ) ಹಾಗಿದ್ದಲ್ಲಿ ಇನ್ನೆಷ್ಟು ದಿವಸಗಳಲ್ಲಿ ಸದರೀ ಬ್ರಾಂಚನ್ನು ಸ್ಥಾಪನೆ ಮಾಡಲಾಗುವುದು?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

(ಅ) ಹೌದು.

(ಆ) ಈ ವಿಷಯವನ್ನು ಕರ್ನಾಟಕ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗುತ್ತಿದೆ. ಎಷ್ಟು ದಿವಸಗಳಲ್ಲಿ ಹೈಕೋರ್ಟ್‌ನ ಪೀಠವನ್ನು ಸ್ಥಾಪಿಸಲಾಗುವುದು ಎಂಬುದನ್ನು ನಿಖರವಾಗಿ ಈ ಹಂತದಲ್ಲಿ ಹೇಳುವುದು ಕಷ್ಟ.